ಯಾಗಿದೆಯೆ ? ಚರ್ಚೆಯಾಗಿ ಏನು ಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ ? ಇದರಲ್ಲಿ ೧೬ ಲಕ್ಷ ರೂಪಾಯಿ ಮಾಲ್ ಅಡ್ಜಸ್ಟ್‌ಮೆಂಟ್ ಆಗಿದೆಯೆಂದು ಸಚಿವರೇ ಒಪ್ಪಿಕೊಂಡಿದ್ದಾರೆ. ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಜಾಗ ಖಾಲಿ ಇದಯೇ ಇಲ್ಲವೇ ? ಯಾರನ್ನು ಅಲ್ಲಿ ಹಾಕಿದ್ದಾರೆ ? ೧೯೮೭ ರಲ್ಲಿ ಈ ಪ್ರಕರಣ ಆಗಿರುವುದೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್.—ಸಿಂಡಿಕೇಟ್ ಸಮಿತಿಯವರು ಪರಿಶೀಲಿಸಬೇಕೆಂದು ಹೇಳಿದ್ದರಿಂದ ಅವರಪರದಿಯನ್ನು ಕಾಯಂತ್ತಿದ್ದೇವೆ. ಈ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಖಾಲಿ ಇರುವ ಜಾಗದಲ್ಲಿ ಯಾರನ್ನಾದರೂ ಹಾಕಿದ್ದಾರೆಯೇ ಎಂದು ಕೇಳಿದ್ದಾರೆ. ಇದರ ಬಗ್ಗೆ ವರದಿಯನ್ನು ತರಿಸಿ ಹೇಳುತ್ತೇನೆ.

ಶ್ರೀ ಯು. ಭೂಪತಿ,—ಇದು ಪಿ. ಜಿ. ಸೆಂಟರ್ ವಿಷಯವಾಗಿರುವುದರಿಂದ ಸರ್ಕಾರಕ್ಕೆ ಇದಂ ಸಂಬಂಧಪಟ್ಟಿರುವುದಿಲ್ಲ. ಮೊದಲು ವಿಶ್ವವಿದ್ಯಾನಿಲಯದವರು ಕ್ರಮ ಜರುಗಿಸಿದಮೇಲೆ ನಂತರ ಸರ್ಕಾರ ಕ್ರಮ ಜರುಗಿಸುತ್ತದೆ. ಅವರನ್ನು ಸಸ್ಪೆಂಡ್ ಮಾಡಿರುವುದು ವಿಶ್ವವಿದ್ಯಾನಿಲಯದವರು, ಸರ್ಕಾರವಲ್ಲ. ವಿಶ್ವವಿದ್ಯಾನಿಲಯದಲ್ಲಿ ಈ ವಿಷಯ ಪ್ರಸ್ತಾಪ ಆಗಿಲ್ಲವೆ ? ಯಾವ ಸಂದರ್ಭದಲ್ಲಿ ಅವರು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಪ್ರಾಪರ್ಟಿಯನ್ನು ಅಟ್ಯಾಚ್ ಮಾಡಿದ್ದಾರೆಯೆ ? ರಿಕವರಿ ಮಾಡುತ್ತಿದ್ದಾರೆಯೆ ? ಇಲ್ಲಿಯವರೆಗೆ ಎಷ್ಟು ರಿಕವರಿ ಆಗಿದೆ ? ಏನು ಫಾಲೋ ಅಪ್ ಆಕ್ಷನ್ ಮಾಡುತ್ತಿದ್ದೀರಿ ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಸದಸ್ಯರು ಏನು ವಿವರಗಳನ್ನು ಕೇಳಿದ್ದಾರೆ, ಅದರ ಬಗ್ಗೆ ವರದಿಯನ್ನು ತರಿಸಿಕೊಡುತ್ತೇನೆ.

ಖಾಸಗೀ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರ ಸಂಬಳವನ್ನು ಕೊಡುವುದರಲ್ಲಿ ವಿಳಂಬವಾಗಿರುವುದು

೧೧೩೨. ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಆನುದಾನ ಪಡೆಯುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರಿಗೆ ಡಿಸೆಂಬರ್ ೮೭ ರಿಂದ ಸಂಬಳ ಕೊಡುವುದರಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?

ಇ) ಸರ್ಕಾರವು ಈ ಬಗ್ಗೆ ಯಾವ ಕಾರ್ಯ ವಿಧಾನವನ್ನು ಸೂಚಿಸಿದೆ ?

ಈ) ಆನುದಾನ ಪಡೆಯುತ್ತಿರುವ ಖಾಸಗಿ ಶಾಲಾ ಶಿಕ್ಷಕರಿಗೆ ಹೈದ್ರಾಬಾದ್ ವೇತನ ಶ್ರೇಣಿಯನ್ನು ಮಂಜೂರು ಮಾಡುವುದು ಯಾವ ಹಂತದಲ್ಲಿದೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು),—

ಅ) ಹೌದು, ಕೆಲವು ಪ್ರಕರಣಗಳಲ್ಲಿ.

ಆ) ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ಗೆ ಒದಗಿಸಲಾದ ಹಣದಲ್ಲಿ ಕೊರತೆಯಾಗಿದ್ದುದರಿಂದ.

ಇ) ಈಗ ಫೆಬ್ರುವರಿ ೮೮ ರ ವರೆಗಿನ ವೇತನ ಬಿಡುಗಡೆಯಾಗಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಕೆಲವು ಪ್ರಕರಣಗಳಲ್ಲಿ 'ಹೌದು' ಎಂದು ಹೇಳಿದ್ದಾರೆ. ಈ ಸಂಖ್ಯೆ ಎಷ್ಟು ಎಂದು ಹೇಳುತ್ತೀರಾ ?

ಶ್ರೀ ಬಿ ಸೋಮಶೇಖರ್.—ತರಿಸಿಕೊಡುತ್ತೇನೆ. ಕೆಲವು ಪ್ರಕರಣಗಳಲ್ಲಿ ಎಂದು ಹೇಳಿದ್ದೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಈ ವಿಳಂಬಕ್ಕೆ ಕಾರಣವೇನು ಎಂದು ತಿಳಿಸುತ್ತೀರಾ ?

ಶ್ರೀ ಬಿ. ಸೋಮಶೇಖರ್.—ಹಣ ಬಿಡುಗಡೆಯಾಗದೇ ಇದ್ದುದರಿಂದ ಸ್ವಲ್ಪ ವಿಳಂಬವಾಗಿದೆ. ಫೆಬ್ರುವರಿ ಕೊನೆಯವರೆಗೆ ಎಲ್ಲರಿಗೂ ವೇತನವನ್ನು ವಿತರಣೆ ಮಾಡಿದ್ದಾರೆ. ಈಗ ಏನೂ ತೊಂದರೆ ಇಲ್ಲ.

ಶಿಕ್ಷಕರು ಮತ್ತು ಇತರೇ ಹುದ್ದೆಗಳ ನೇಮಕಾತಿ

೧೦೫೮. ಶ್ರೀ ಮಹಮ್ಮದ್ ಲೈಕುದ್ದೀನ್ (ಬೀದರ್).—ಪ್ರಾಥಮಿಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿ ಆಡಳಿತ ಮಂಡಳಿಗಳಿಂದ ನಡೆಸಲ್ಪಡುವ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ಮತ್ತು ಇತರೇ ಹುದ್ದೆಗಳ ನೇಮಕಾತಿಗೆ ನೇಮಕಾತಿ ಸಮಿತಿ ರಚಿಸಿ ಸರ್ಕಾರ ಆಕ್ಟೋಬರ್ ೧೯೮೭ ರಲ್ಲಿ ಆಜ್ಞೆ ಹೊರಡಿಸಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಅನುದಾನ ಸಂಹಿತೆಯಲ್ಲಿ ಆಡಳಿತ ಮಂಡಳಿಗೆ ಕೊಡಲಾದ ನೇಮಕಾತಿ ಅಧಿಕಾರವನ್ನು ಹಿಂದಕ್ಕೆ ಪಡೆದಂತೆ ಆಗುವುದಿಲ್ಲವೇ ?

ಇ) ಭಾರತ ಸಂವಿಧಾನದ ಅಡಿಯಲ್ಲಿ ಕೊಡಲಾದ ಸೌಲಭ್ಯವನ್ನು ಇಂತಹ ಸರ್ಕಾರಿ ಆದೇಶವು ಮೊಟಕುಗೊಳಿಸಿದಂತೆ ಆಗುವುದಿಲ್ಲವೇ ?

ಈ) ಹಾಗಿದ್ದಲ್ಲಿ ಇಂತಹ ಆದೇಶವನ್ನು ಸರ್ಕಾರ ಹಿಂತೆಗೆದುಕೊಳ್ಳುವುದೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕಂಡರಿ ಶಿಕ್ಷಣದ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಈ) ಇಲ್ಲ.

SRI MOHAMMED LAIQUDDIN.—Sir, formerly the private Managements had the rights to establish, run and administer private educational institutions particularly the minority institutions. Right to administer means right to appoint teachers as well as other staff members. By the issue of this Government order reconstituting the Selection Committees, there are nominated members in majority; one representative from the Government, one from the D.D.P.I ; one representative from the Zilla Parishads and there will be only one representative from the private Management. This is a direct infringement on the fundamental rights of the private Managements to run and administer their own educational institutions. There are so many Suprime Court and High Courts Rulings to the effect that there should not be any interference in the rights of the private Managements regarding appointment of teachers and other staff Members. As per the Constitutional safeguards provided particularly to the minority institutions under Articles 29 and 30 of the Constitution, Minorities are entitled to establish as well as to run and administer their own institutions. If the power of appointment is